“ಅಲ್ಲ, ಡ್ಯಾಡಿ ಯಾಕ ಚಿಂತಿ ಮಾಡತಾರು?”

“ಯಾಕಂದ್ರ ಅವರೀಗ ಹೊಸ ನೌಕರಿ ಹುಡುಕಬೇಕಾಗೇದ. ನಿನಗ ನೆನಪಿರಬೇಕು, ಮೊನ್ನಿ ಮೊನ್ನಿತನಕ ನಾನು ಮತ್ತು ನೀನು ಕೂಡಿ ಪೋಸ್ಟ್ ಆಫೀಸ್‌ಗೆ ಹೋಗಿ ತಿಂಗಳಿಗೊಮ್ಮೆ ದುಡ್ಡು ತಗೊಂಡು ಬರ್ತಿದ್ವಿ. ಅಲ್ಲಾ? ಆ ಮನಿಆರ್ಡರ್‌ಅನ್ನು ನಿಮ್ಮ ಪಪ್ಪ ಮಿಲಿಟರಿಯೊಳಗಿಂದ ಕಳಿಸ್ತಿದ್ರು. ಈಗ ಅವರು ನಿವೃತ್ತಿ ಆಗ್ಯಾರು. ಹೊಸ ಉದ್ಯೋಗ ಯಾವಾಗ ಸಿಗತೇತಿ, ಎಲ್ಲಿ ಸಿಗತೇತಿ ಅಂತ ಚಿಂತಿ ಆಗೇತಿ. ದುಡ್ಡು ಇಲ್ಲದ ಜೀವನ ಮಾಡಲಿಕ್ಕೆ ಆಗ್ತದೇನು? ಇಲ್ಲಾಂದ್ರ ನಾವೂ ಊಟಕ್ಕಾಗಿ ಭಿಕ್ಷಾ ಬೇಡಬೇಕಾಗ್ತದ. ನೋಡು. ಅಂತಹ ಪರಿಸ್ಥಿತಿ ಬರಬೇಕೇನು?”

“ಬ್ಯಾಡಮ್ಮ... ಮರೇ ಬ್ಯಾಡ. ರಸ್ತೆಯಲ್ಲಿ ಕೂತು ಬೇಡುವಂತಹ ಪರಿಸ್ಥಿತಿ ನಮಗೆಂದೂ ಬರಬಾರದು. ಇನ್ನ ಮ್ಯಾಲ ನಾನು ಮುಂಜಮುಂಜಾನೆ ಬಂದು ಡ್ಯಾಡಿಗೆ ಡಿಸ್ಟರ್ಬ್ ಮಾಡಂಗಿಲ್ಲ. ಆಯ್ತಾ. ಪ್ರಾಮಿಸ್.” ಅವಳ ಕೋರಿಕೆಯನ್ನು ನಾನು ಎಷ್ಟು ಬೇಗ ಒಪ್ಪಿಕೊಂಡೆ ಎಂದು ಅವಳಿಗೆ ಖುಷಿ ಆಗಿರಬೇಕು.

ವಚನ ಪರಿಪಾಲನೆ ಎಷ್ಟು ಕಷ್ಟವೆಂದು ನನಗೆ ಗೊತ್ತಿತ್ತು. ಆದರೂ ನಾನು ಪಾಲಿಸಲು ನಿರ್ಧರಿಸಿದೆ. ಎದ್ದ ಕೂಡಲೆ ಅವ್ವನ ರೂಮಿಗೆ ಓಡಬೇಕೆಂದವನು ತಾಯಿಗೆ ಕೊಟ್ಟ ವಚನ ನೆನಪಾಗಿ ಓಹ್ ಎಂದು ಕ್ಷಣಹೊತ್ತು ಸುಮ್ಮನೆ ಕುಳಿತೆ. ನನ್ನ ಹಾಸಿಗೆಯ ಸುತ್ತ ಆಟಿಕೆಗಳನ್ನು ನೋಡಿ ಆಶ್ಚರ್ಯವಾಯಿತು. ಹಿಂದಿನ ರಾತ್ರಿಯೆ ಅವ್ವ ನನ್ನ ಬೆಡ್ಡಿನ ಸುತ್ತ ಆಟಿಕೆಗಳನ್ನು ಇಟ್ಟು ಹೋಗಿದ್ದಳು. ಅಂದರೆ ನಾನು ಮುಂಜಾನೆ ಎದ್ದ ಮೇಲೆ ನನ್ನ ಲಕ್ಷ್ಯ ಅವುಗಳತ್ತ ಹೋಗಿ ಆಟವಾಡುತ್ತ ಕೂಡ್ರಬೇಕು. ಅಪ್ಪಿ–ತಪ್ಪಿಯೂ ಅವಳ ಕೋಣೆಗೆ ಹೋಗಬಾರದೆನ್ನುವ ಹಂಚಿಕೆ ಅವಳದು. ಒಂದಾದ ಮೇಲೊಂದರಂತೆ ಎಲ್ಲ ಆಟ ಆಡಿದೆ. ಸುಮಾರು ಹೊತ್ತು ಕಳೆದೆನು ಎಂದುಕೊಂಡೆ. ಆಮೇಲೆ ಬಾಲ್ಕನಿಗೆ ಬಂದು ಆಗಷ್ಟೆ ಉದಯವಾಗುತ್ತಿದ್ದ ಸೂರ್ಯನನ್ನೂ ಅವನ ಬೆಳ್ಳಿಕಿರಣಗಳನ್ನೂ ಸುತ್ತಮುತ್ತಲ ಗಿಡಮರಗಳನ್ನೂ ನೋಡತೊಡಗಿದೆ. ಅಬ್ಬಾ! ಎಷ್ಟೋ ತಾಸುಗಳಿಂದ ನಾನು ನೋಡುತ್ತಿದ್ದೇನೆ ಎಂದು ಅನಿಸಿತು. ಅವ್ವ ಈಗ ಎದ್ದು ಬರಬಹುದು, ಆಗ ಎದ್ದು ಬರಬಹುದು ಎಂದು ಅವಳ ಮುಚ್ಚಿದ ಬಾಗಿಲದತ್ತ ನೋಡತೊಡಗಿದೆ. ‘ಏನೋ ಲ್ಯಾರಿ, ನಿನ್ನ ಕಾಯಿಸಿಬಿಟ್ನೇನೋ, ನಿನಗ ಚಾ ಮಾಡಿಕೊಡಲೇನು’ ಎನ್ನಬಹುದು ಎಂದು ಊಹಿಸುತ್ತ ಕಾದೆ. ಎಷ್ಟೊತ್ತಾದರೂ ಅವ್ವನ ಸುಳಿವಿಲ್ಲ. ಅಪ್ಪನದೂ ಸುಳಿವಿಲ್ಲ. ತುಂಬ ಬೇಸರ ಎನಿಸತೊಡಗಿತು. ಎಷ್ಟಂತ ಪುನಃ ಪುನಃ ಅದೇ ಆಟಗಳನ್ನು ಆಡುವುದು? ಅವ್ವನ ಕೋಣೆಗೆ ಹೋಗುವುದು ಬೇಡ, ಅವಳ ಕೋಣೆಯ ಹತ್ತಿರ ನಿಂತರೆ ಸ್ವಲ್ಪ ಸಮಾಧಾನವಾಗಬಹುದು ಎನಿಸಿತು. ಮನಸ್ಸು ವಚನವನ್ನು ನೆನಪಿಸಿ ಎಷ್ಟೆ ಪ್ರತಿರೋಧ ಒಡ್ಡಿದರೂ ನನ್ನ ಕಾಲುಗಳು ಅವ್ವನ ಕೋಣೆಗೆ ನಡೆದವು. ಅಲ್ಲಿ ಎಷ್ಟೆಲ್ಲ ನೆಮ್ಮದಿಯಿರುತ್ತದೆ. ಎಷ್ಟು ಬೇಗ ನಿದ್ದೆ ಬರುತ್ತದೆ! ನಾನು ಸರಸರ ಹೋಗಿ ಅಪ್ಪನಿಗೆ ಗೊತ್ತಾಗದಂತೆ ಅವ್ವನನ್ನು ತಬ್ಬಿಕೊಂಡು ಮಲಗಿದೆ. ಅವ್ವನಿಗೆ ಒಮ್ಮೆಲೆ ಎಚ್ಚರವಾಯಿತು.

“ಲ್ಯಾರಿ! ಮತ್ತೆ ಬಂದಬಿಟ್ಟೆ? ನಿನ್ನೆ ನೀನು ಏನ್ ಪ್ರಾಮಿಸ್ ಮಾಡಿದ್ದಿ?”

“ಅವ್ವ, ಮತ್ತೆ ಎಷ್ಟೊತ್ತು ಕಾದೆ? ನನಗ ನಿನ್ನ ಹತ್ತಿರ ಬರಲಿಲ್ಲಂದ್ರ ಎಲ್ಲಾ ಬ್ಯಾಡ ಅನಿಸಬಿಡ್ತದ.”

ಅವ್ವನೂ ನನ್ನನ್ನು ಗಟ್ಟಿಯಾಗಿ ತಬ್ಬಿಕೊಂಡು ಅಂದಳು: “ಆಯ್ತು. ಆದರ ಒಂದು ಕಂಡೀಶನ್. ನೀನು ಇಲ್ಲಿ ಮಲಕೋದಾದ್ರ ಮಾತಾಡಬಾರದು. ಸುಮ್ಮನ ಮಲಕ್ಕೋಬೇಕು. ತುಟಿ ಪಿಟ್ ಅನ್ನಬಾರದು. ಗೊತ್ತಾತೇನು?”

“ಆದರ ಮಮ್ಮಿ, ನಾನು ನಿನ್ನ ಜೋಡಿ ಮಾತಾಡಬೇಕು. ಮಲಗೋದಕ್ಕಿಂತ ನನಗೆ ಮಾತಾಡೋದೆ ಮುಖ್ಯ...”